


ನಲುಗಿದವರ ನರಕಯಾತನೆಯನ್ನು ಯಾರು ಬಲ್ಲರು... ಮುಳುಗಡೆಗೊಂಡ ಗ್ರಾಮಸ್ಥರಿಗೆ ಕಾಡಂಚಿನ ಗ್ರಾಮಗಳಲ್ಲಿ ಪರ್ಯಾಯ ಭೂಮಿಯನ್ನೋ, ಪರಿಹಾರವನ್ನೋ ನೀಡಿದರೆನ್ನಿ. ಆದರೆ ಅವಿನಾಶಿ ಗ್ರಾಮವು ಪೂರ್ತಿ ಮುಳುಗಲಿಲ್ಲವೆಂದು ಸ್ಥಳಾಂತರಿಸುವ ಪ್ರಕ್ರಿಯೆಯಿಂದ ಕೈಬಿಟ್ಟರು. ಸುತ್ತಮುತ್ತಲ ಮುಳುಗಡೆಗೊಂಡ ಗ್ರಾಮಸ್ಥರಲ್ಲಿ ಅನೇಕರು ತಮ್ಮ ಬೇರನ್ನು ಸಂಪೂರ್ಣವಾಗಿ ಸ್ಥಳಾಂತರಿಸಿಕೊಂಡು ದೂರದ ಶೆಟ್ಟಿಹಳ್ಳಿಗೋ, ಪುರದಾಳಿಗೋ ಹೋಗಲು ಒಪ್ಪದೆ ಅವಿನಾಶಿಗೇ ಬಂದು ನೆಲೆಯೂರಿದರು—ಕನಿಷ್ಠ ಬೇಸಿಗೆಯಲ್ಲಾದರೂ ತಮ್ಮ ಮೂಲಕ್ಕೆ ಹೋಗಿ ಅಡ್ಡಾಡಿಕೊಂಡು ಬರಬಹುದೆಂದು.

ಆದರೆ ಸಮತಟ್ಟಾದ ಬೆಟ್ಟದಂತಿದ್ದ ಅವಿನಾಶಿಯ ಸುತ್ತಲೂ ಅಪಾರ ಪ್ರಮಾಣದ ನೀರು ಸಿಲೋನನ್ನು ಆಕ್ರಮಿಸಿಕೊಂಡಂತೆ ಆಕ್ರಮಿಸಿಕೊಂಡಿತ್ತು. ಮಳೆಗಾಲದ ಮೂರು ತಿಂಗಳು ಮಾತ್ರವಲ್ಲದೆ ಒದ್ದುಕೊಂಡಿದ್ದ ನೀರು ಹಿಂದೆ ಸರಿಯಲು ಇನ್ನೂ ಮೂರು ತಿಂಗಳು ಬೇಕಾಗುತ್ತಿತ್ತು. ಅಂದರೆ

